## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
## ದಕ್ಷಿಣ ಕನ್ನಡ, ಮಂಗಳೂರು

### ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂದೀಪ್ | ಫ್ರಾಸಾಃ 9 |
| ತಂದೆಯ ಹೆಸರು | : | ಯೋಗೀಂದ್ರ ಕೋಟ್ಯಾನ್ | ಚಾಸಾಃ 3 |
| ಪ್ರಾಯ | : | 37 ವರ್ಷ | ದಿನಾಂಕಃ 06.01.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ದಿ 07.09.2020 ನನ್ನನ್ನು ಪೋಲೀಸರು ಕದ್ರಿ ಪೋಲೀಸ್ ಠಾಣೆಗೆ ಕರೆಸಿದ್ದರು. ಕದ್ರಿ ಶಿವಭಾಗಕ್ಕೆ ಮಹಜರಿಗೆಂದು ಕರೆದುಕೊಂಡು ಹೋಗಿದ್ದರು. ಪಂಪ್ ವೆಲ್ ಕಡೆಯಿಂದ ಬಂದ ಸ್ಕೂಟರ್ ಅನ್ನು ಚೇಸ್ ಮಾಡಿ ಕದ್ರಿ ಶಿವಭಾಗದಲ್ಲಿ ನಿಲ್ಲಿಸಿರುತ್ತಾರೆ. ಗಾಡಿಯ ಡಿಕ್ಕಿಯಲ್ಲಿದ್ದ ಗಾಂಜವನ್ನು ತೋರಿಸಿರುತ್ತಾರೆ. ಗಾಂಜ 2 ಕೆ.ಜಿಗಿಂತ ಹೆಚ್ಚು ಇತ್ತು ಎಂದು ಪೋಲೀಸರು ಹೇಳಿರುತ್ತಾರೆ. ಪೋಲೀಸರು ಗಾಂಜವನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಪೋಲೀಸರು ಮಹಜರಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಸ್ಕೂಟರ್ ನೋಂದಣಿ ಸಂಖ್ಯೆ

ನನಗೆ ಗೊತ್ತಿಲ್ಲ. ಈಗ ನೋಡಿದ ಮಹಜರ್ (ನಿಪಿ–2) ರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ–2(ಎಫ್) ಎಂದು ಗುರುತಿಸಲಾಯಿತು. ಮಹಜರ್ ಅನ್ನು 4 ರಿಂದ 4.15ರ ವರೆಗೆ ಸ್ಟೇಷನ್ ನಲ್ಲಿ ಬರೆದಿರುತ್ತಾರೆ. ಸ್ಕೂಟರ್ ನಲ್ಲಿ ಬಂದವನ ಹೆಸರು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಬಂದ ವ್ಯಕ್ತಿ ಸ್ಕೂಟರ್ ನಲ್ಲಿ ಬಂದಿರುತ್ತಾನೆ. ಈಗ ನೋಡಿದ ಫೋಟೋಗಳಲ್ಲಿ (ನಿಪಿ–3) ಕಾಣುವ ಸ್ಕೂಟರ್ ಅನ್ನು ಆ ದಿನ ನೋಡಿರುತ್ತೇನೆ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

2. ಆರೋಪಿಯಿಂದ ಪೋಲೀಸರು ವಿವೋ ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದರು ಎಂದರೆ ನಾನು ನೋಡಿರುವುದಿಲ್ಲ. ಈಗ ತೋರಿಸಿದ (ಮು ಮಾ.2) ಹಳದಿ ಬಣ್ಣದ ಚೀಲವನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ ಎನ್ನುವುದು ನಿಜ. ಗಾಂಜ 2 ಕೆ.ಜಿ 200 ಗ್ರಾಂ ಇತ್ತು ಎಂದು ಹೇಳುವುದು ನಿಜ. ಸ್ಥಳದಲ್ಲೇ ಪೋಲೀಸರು ಮಹಜರು ಮಾಡಿರುತ್ತಾರೆ ಎಂದರೆ ನಿಜ.

ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ

3. ಪೋಲೀಸ್ ಠಾಣೆಯಿಂದ ತಕ್ಷೀರು ಸ್ಥಳಕ್ಕೆ ಹೊರಟಾಗ ಸಮಯ ಎಷ್ಟು ಆಗಿತ್ತು ಎಂದು ನೆನಪಿಲ್ಲ. ಪೊಲೀಸರು ನನಗೆ ಪಂಚರಾಗಿ ಬರುವಂತೆ ನೋಟೀಸು ಕೊಟ್ಟಿರುವುದಿಲ್ಲ. ತಕ್ಷೀರು ಸ್ಥಳಕ್ಕೆ ಹೋಗುವ ಮೊದಲು ಯಾತಕ್ಕಾಗಿ ಹೋಗುತ್ತಿದ್ದೇವೆ ಎನ್ನುವುದನ್ನು ಪೋಲೀಸರು ತಿಳಿಸಿರುತ್ತಾರೆ. ತಕ್ಷೀರು ಸ್ಥಳಕ್ಕೆ ಹೋಗು ಮೊದಲು ನನ್ನ ಅಂಗ ಶೋಧನೆ ಪೋಲೀಸರು ಮಾಡಿಲ್ಲ. ಅದೇ ರೀತಿ ಪೋಲೀಸರು ತಮ್ಮ ಅಂಗ ಶೋಧನೆಯನ್ನು ಮಾಡಿಕೊಂಡಿರುವುದಿಲ್ಲ.

4. ಗಾಂಜ ಕಟ್ಟನ್ನು ಗಾಡಿಯ ಡಿಕ್ಕಿಯಿಂದ ತೆಗೆದುಕೊಡಲಾಗಿತ್ತು. ಯಾರು ಗಾಡಿಯ ಡಿಕ್ಕಿಯನ್ನು ತೆರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಗಾಂಜದಲ್ಲಿ ಏನೆಲ್ಲಾ ಇದ್ದವು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಗಾಂಜವನ್ನು ಠಾಣೆಯಲ್ಲಿ ತೂಕ ಮಾಡಿರುತ್ತಾರೆ. ಗಾಂಜವನ್ನು 4.15 ರ ಸಮಯದಲ್ಲಿ ತೂಕ ಮಾಡಿದ್ದಾರೆ. ಆರೋಪಿಯಿಂದ ಗಾಂಜ ಮತ್ತು ಇತರೆ ವಸ್ತುಗಳನ್ನು ಯಾವ ಪೋಲೀಸ್ ವಶಪಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್ ಚೀಲದ ಮೇಲೆ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್ ಚೀಲದೊಂದಿಗೆ ತೂಕ ಮಾಡಲಾಗಿದೆ.

5. ತಕ್ಷೀರು ಸ್ಥಳದ ಹತ್ತಿರ ಸುಮಾರು 20 ನಿಮಿಷಗಳ ಕಾಲ ಇದ್ದೆವು. ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳುತ್ತಿದ್ದೇನೆ. ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ ನನ್ನ ಸಮಕ್ಷಮ ಪೋಲಿಸರು ಗಾಂಜವನ್ನು, ಸ್ಕೂಟರ್ ಅನ್ನು ವಶಕ್ಕೆ ಪಡೆದಿಲ್ಲ ಎಂದು ಹೇಳುವುದು ಸರಿಯಲ್ಲ. ಪೋಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.